ಶಿಗ್ಗಾಂವ್, ಪಟ್ಟಣಗಳಿಗೆ ಸಂಯೋಜನೆ ನೀರು ಸರಬರಾಜು ಮಂಜೂರಾತಿ.

390 (805) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಶಿಗ್ಗಾಂವ್, ಸವನೂರು, ಬಂಕಾಪುರ ಪಟ್ಟಣಗಳಿಗೆ ಸಂಯೋಜನೆ ನೀರು ಸರಬರಾಜು ಯೋಜನೆ ಮಂಜೂರಾಗಿರುವುದು ನಿಜವೇ?
2. ಹಾಗಿದ್ದಲ್ಲಿ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ?
3. ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

1. ಹೌದು
2. ಆಡಳಿತಾತ್ಮಕ ಅನುಮೋದನೆ ನೀಡಿದ್ದು ತಾಂತ್ರಿಕ ಮಂಜೂರಾತಿಯನ್ನು ನೀಡಬೇಕಾಗಿದೆ.
3. ಈ ಯೋಜನೆಯನ್ನು 1992-93ನೇ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು.

ಶಿಗ್ಗಾಂವ್ ತಾಲ್ಲೂಕುಗಳಲ್ಲಿ ಸಾರಾಯಿ ಅಂಗಡಿಗಳಿಗೆ ಪರವಾನಗಿ.

391 (807) ಶ್ರೀ ಮಂಜುನಾಥ ಸಿ. ಕೊನ್ನೂರು (ಶಿಗ್ಗಾಂವ್):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಎಷ್ಟು ಸಾರಾಯಿ ಅಂಗಡಿಗಳಿಗೆ ಪರವಾನಿಗೆ ನೀಡಲಾಗಿದೆ.

ಆ) ಅಧಿಕೃತವಾಗಿ ಹಾಗೂ ಅನಧಿಕೃತವಾಗಿ ಎಷ್ಟು ಅಂಗಡಿಗಳು ಆ ಎರಡೂ ತಾಲ್ಲೂಕುಗಳಲ್ಲಿ ಇವೆ, ಹಾಗೂ ಇದರಿಂದ ಮಾನ್ಯ ಸರ್ಕಾರಕ್ಕೆ ಆದ ಲಾಭ ನಷ್ಟದ ವಿವರವನ್ನು ಒದಗಿಸುವುದು.

ಇ) ಕೆಲವೊಂದು ಹಳ್ಳಿಗಳಲ್ಲಿ ಗ್ರಾಮಸ್ಥರೆಲ್ಲರೂ ಸೇಂದಿ ಸಾರಾಯಿ ಅಂಗಡಿ ಪ್ರಾರಂಭಿಸದಿರಲು ತಕರಾರು ಮಾಡಿದಗ್ಯೂ ಸರ್ಕಾರದ ಅಬಕಾರಿ ಖಾತೆಯವರು ಒತ್ತಾಯ ಪೂರ್ವಕವಾಗಿ ಅಂಗಡಿಗಳನ್ನು ಪ್ರಾರಂಭಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲವು ಏನು?

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು.):-

ಅ)

ತಾಲ್ಲೂಕು	ಸಾರಾಯಿ ಅಂಗಡಿ
ಶಿಗ್ಗಾಂವ	36
ಸವಣೂರು	28

ಆ) ಅನಧಿಕೃತ ಅಂಗಡಿಗಳು ಇರುವುದಿಲ್ಲ. ಸರ್ಕಾರಕ್ಕೆ ಬಂಗಿರುವ ಆದಾಯ ಕ್ರಮವಾಗಿ 5,40,000 ಮತ್ತು 4,50,000 ರೂಪಾಯಿಗಳು.

ಇ) - ಇಲ್ಲ -

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.